ಅನುಬಂಧ-III

ದಿನಾಂಕ 19-3-2003ರ ಚುಕ್ಕೆ ಗುರುತಿನ ಪ್ರಶ್ನೋತ್ತರಗಳು

177(2043) ಶ್ರೀ ದಿನೇಶ್ ಗುಂಡುರಾವ್ (ಗಾಂಧೀನಗರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕರ್ನಾಟಕ ಕೊಳಚೆ ನಿಮೂಲನ ಮಂಡಳಿಯಿಂದ ನಿರ್ಮಲಜ್ಯೋತಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವುದು ನಿಜವೆ; ಹಾಗಿದ್ದಲ್ಲಿ. ಈ ಯೋಜನೆಯ ರೂಪುರೇಷೆಗಳೇನು;

ಆ. ಈ ಯೋಜನೆಯನ್ನು ಮಹಾನಗರ ಪಾಲಿಕೆ ಹೊರತಾದ ಪ್ರದೇಶಗಳಲ್ಲಿ ಮಾತ್ರ ಅನುಷ್ಠಾನಗೊಳಿಸಲು ತೀರ್ಮಾನಿಸಿರುವುದು ನಿಜವೇ;

ಇ. ಈ ಯೋಜನೆಯನ್ನು ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿರುವ ಕೊಳಚೆ ಪ್ರದೇಶಗಳಿಗೂ ವಿಸ್ತರಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಸಗೀರ್ ಅಹಮದ್ (ವಸತಿ ಸಚಿವರು)

ಅ. ಹೌದು, ಕರ್ನಾಟಕ ಕೊಳಚೆ ನಿರ್ಮೂಲನಮಂಡಳಿಯು ನಿರ್ಮಲ ಜ್ಯೋತಿ ಯೋಜನೆಯನ್ನು ರಾಜ್ಯದ 21 ಪ್ರಥಮ ದರ್ಜೆ ನಗರದಲ್ಲಿ ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಯ ರೂಪುರೇಷೆಗಳೆಂದರೆ:

1. ಮೂಲಭೂತ ಸೌಕರ್ಯ ಉನ್ನತೀಕರಣ ಮತ್ತು ಸೇವೆಗಳು.
2. ಕೊಳಚೆ ಪ್ರದೇಶದಲ್ಲಿ ವಾಸಿಸುವ ಕುಟುಂಬಗಳಿಗೆ ಪ್ರತ್ಯೇಕ ಸೌಲಭ್ಯ ಒದಗಿಸುವುದು.
3. ವಸತಿ ಮತ್ತು ಭೂ ಅಭಿವೃದ್ಧಿ ಯೋಜನೆ.

ಆ. ಹೌದು, ಬೆಂಗಳೂರು ನಗರ ಹೊರತುಪಡಿಸಿ ರಾಜ್ಯದ 21 ಪ್ರಥಮ ದರ್ಜೆ ನಗರಗಳಲ್ಲಿ ಈ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ.

ಇ. ಈ ಯೋಜನೆಯನ್ನು ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿರುವ ಕೊಳಚೆ ಪ್ರದೇಶಗಳಿಗೂ ಸಹ ವಿಸ್ತರಿಸಲು ಸರ್ಕಾರ ಉದ್ದೇಶಿಸಿದ್ದು, ಈ ಸಂಬಂಧದ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀರಂಗಪಟ್ಟಣ-ಜನರಲ್ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು

178(2041) ಶ್ರೀಮತಿ ಪಾರ್ವತಮ್ಮ ಶ್ರೀಕಂಠಯ್ಯ (ಶ್ರೀ ರಂಗಪಟ್ಟಣ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಶ್ರೀರಂಗಪಟ್ಟಣ ಜನರಲ್ ಆಸ್ಪತ್ರೆಯನ್ನು 100 ಹಾಸಿಗೆಗೆ ಏರಿಸುವ ಪ್ರಸ್ತಾವನೆ ಇದೆಯೇ;

ಆ. ತಾಲ್ಲೂಕಿನಲ್ಲಿ ಎಷ್ಟು ಜನ ವೈದ್ಯರುಗಳು ಕಾರ್ಯನಿರ್ವಹಿಸುತ್ತಿದ್ದಾರೆ ಮತ್ತು ಎಷ್ಟು ಹುದ್ದೆಗಳು ಖಾಲಿ ಇವೆ; ಖಾಲಿ ಹುದ್ದೆಗಳನ್ನು ತುಂಬುವ ಬಗ್ಗೆ ಕೈಗೊಂಡಿರುವ ಕ್ರಮಗಳೇನು;

ಇ. ಈ ಆಸ್ಪತ್ರೆಯಲ್ಲಿ ಶೂಶ್ರೂಷಕಿಯರ ಹುದ್ದೆಗಳು ಎಷ್ಟಿವೆ; ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು;

ಈ. ತಾಲ್ಲೂಕಿನಾದ್ಯಂತ ಎಷ್ಟು ಸರ್ಕಾರಿ ಆಸ್ಪತ್ರೆಗಳಿವೆ; ಆವುಗಳಲ್ಲಿ ಉನ್ನತೀಕರಣಗೊಳಿಸುತ್ತಿರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು;

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ. ಇಲ್ಲ.

ಆ. ಈ ತಾಲ್ಲೂಕಿನಲ್ಲಿ 22 ಜನ ವೈದ್ಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ತಾಲ್ಲೂಕು ಆರೋಗ್ಯಾಧಿಕಾರಿ ಹುದ್ದೆ ಹೊರತು ಪಡಿಸಿ ಇನ್ನಾವುದೇ ವೈದ್ಯರ ಹುದ್ದೆ ಖಾಲಿ ಇರುವುದಿಲ್ಲ. ಖಾಲಿ ಹುದ್ದೆಗಳನ್ನು ಮುಂಬರುವ ಸಾಮಾನ್ಯ ವರ್ಗಾವಣೆ ಸಮಯದಲ್ಲಿ ತುಂಬಲಾಗುವುದು.

ಇ. ಈ ಆಸ್ಪತ್ರೆಯಲ್ಲಿ ಶುಶ್ರೂಷಕಿಯರ 3 ಹುದ್ದೆಗಳು ಮಂಜೂರಾಗಿದ್ದು ಇವುಗಳಲ್ಲಿ 2 ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು 1 ಹುದ್ದೆ ಖಾಲಿ ಇರುತ್ತದೆ.

ಈ. ತಾಲ್ಲೂಕಿನಾದ್ಯಂತ ಒಟ್ಟು 9 ಸರ್ಕಾರಿ ಆಸ್ಪತ್ರೆಗಳು ಇವೆ. ಯಾವುದೇ ಆಸ್ಪತ್ರೆಗಳನ್ನು ಈಗ ಉನ್ನತೀಕರಣಗೊಳಿಸಿರುವುದಿಲ್ಲ.

ಕುಂದಾಪುರ ತಾಲ್ಲೂಕು ಆರೋಗ್ಯ ಅಧಿಕಾರಿಗಳಿಗೆ ಜೀಪ್ ಸರಬರಾಜು

179(2086) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕುಂದಾಪುರ ತಾಲ್ಲೂಕು ಆರೋಗ್ಯ ಅಧಿಕಾರಿಗಳಿಗೆ 1999-2000ನೇ ಸಾಲಿನಲ್ಲಿ ಮಂಜುರಾದ ಜೀಪ್ ಸರಬರಾಜು ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಬಂದಿದ್ದಲ್ಲಿ, ಜೀಪ್ ಸರಬರಾಜು ಮಾಡದೇ ಇರಲು ಕಾರಣವೇನು? ಜೀಪ್ ಸರಬರಾಜು ಮಾಡದೆ ಇರುವುದರಿಂದ ತಾಲೂಕು ಆರೋಗ್ಯ ಅಧಿಕಾರಿಗಳಿಗೆ ಕರ್ತವ್ಯ ನಿರ್ವಹಣೆಯಲ್ಲಿ ತೊಂದರೆಯಾಗಿಲ್ಲವೆ?

ಇ. ಯಾವಾಗ ವಾಹನ ಸರಬರಾಜು ಮಾಡಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬಕಲ್ಯಾಣ ಸಚಿವರು)

ಅ. ಹೌದು

ಆ. 1999-2000ನೇ ಸಾಲಿನ ಸೆಪ್ಟೆಂಬರ್ ತಿಂಗಳಿನಲ್ಲಿ ಕುಂದಾಪುರ ತಾಲ್ಲೂಕು ಆರೋಗ್ಯ ಅಧಿಕಾರಿಗಳಿಗೆ, ಒಂದು ಟೆಂಪೋ ಟ್ರಾ ಕ್ ವಾಹನ ಸರಬರಾಜಿಗಾಗಿ ಆದೇಶ ನೀಡಲಾಗಿತ್ತು.